ಕರ್ನಾಟಕ ವಿಧಾನ ಸಭೆ

ಬುಧುವಾರ ಒಂದನೇ ಸೆಪ್ಟೆಂಬರ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ವಿ.ಎಸ್.ಕೌಜಲಗಿ)ಅವರು ಪೀಠವನ್ನು ಅಲಂಕರಿಸಿದ್ದರು.

:-0:-

ಪ್ರಶ್ನೋತ್ತರಗಳು

(ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್‌ನವರು ಒಬ್ಬರೂ ಇಲ್ಲ. ಮಂತ್ರಿಗಳೂ ಇಲ್ಲ. ಸರ್ಕಾರ ಏನಾಗಿದೆ? ಸರ್ಕಾರ ಇದೆಯೋ ಅಥವಾ ಇಲ್ಲವೋ? ಯಾರಾದರೂ ರಾಜೀನಾಮೆಯನ್ನು ಕೊಟ್ಟಿದ್ದಾರೋ? ಮಾನ್ಯ ಮುಖ್ಯ ಮಂತ್ರಿಗಳೂ ಇಲ್ಲ. ಸಚಿವಸಂಪುಟದ ಮಾನ್ಯ ಮಂಜುನಾಥ್‌ರವರು ಹಾಗೂ ಮಾನ್ಯ ನಾಗೇಗೌಡರನ್ನು ಬಿಟ್ಟರೆ ಇನ್ನು ಬೇರೆ ಮಂತ್ರಿಯವರು ಯಾರೂ ಕಾಣುತ್ತಿಲ್ಲ. ಉಳಿದವರೆಲ್ಲಾ ಎಲ್ಲಿ ಹೋಗಿದ್ದಾರೆ? ಪರಿಸ್ಥಿತಿ ಏನಾಗಿದೆ ಎಂಬುದು ನಮ್ಮ ಈ ಸದನಕ್ಕೆ ಗೊತ್ತಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವನ್ನು ಸದನಕ್ಕೆ ತಿಳಿಸಬೇಕು. ಇಡೀ ಕಾಂಗ್ರೆಸ್‌ನವರ ಪೈಕಿ ಕೇವಲ 6 ಜನ ಮಾತ್ರ ಇದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ ನಾವೇ 30 ಜನರಿದ್ದೇವೆ. ಇದನ್ನು ನೋಡಿದರೆ ನನಗೆ ಅತ್ಯಂತ ವಿಷಾದವಾಗುತ್ತದೆ. ಈಗ ಈ ಸರ್ಕಾರ ಇದೆಯೋ, ಅಥವಾ ರಾಜೀನಾಮೆಯನ್ನು ಕೊಟ್ಟಿದ್ದೆಯೋ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆಗಿಂತ ಮುಂಚಿತವಾಗಿ ನೋ ಕಾನ್‌ಫಿಡೆನ್ಸ್ ಮೋಷನ್‌ನ್ನು ದಯವಿಟ್ಟು ಚರ್ಚೆಗೆ ತೆಗೆದುಕೊಳ್ಳಿ. ಆಗ ಸುಲಭವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೋ ಏನೋ ನಮಗೆ ಗೊತ್ತಿಲ್ಲ. ಆದುದರಿಂದ ತಾವು ನೋ-ಕಾನ್‌ಫಿಡೆನ್ಸ್ ಮೋಷನ್‌ನ್ನು ಮೊದಲು ತೆಗೆದುಕೊಳ್ಳಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ತಮಗೆ ಅರ್ಥವಾಗಬಹುದು. ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ. ಸಚಿವ ಸಂಪುಟದ ಕೇವಲ ಇಬ್ಬರು ಮಂತ್ರಿಗಳನ್ನು ಬಿಟ್ಟರೆ ಉಳಿದವರು ಯಾರೂ ಇಲ್ಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ಇವತ್ತಿನ ಪ್ರಶ್ನೋತ್ತರ ಸಂದರ್ಭದಲ್ಲಿ 8 ಜನ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಇರಬೇಕಾಗಿದೆ. ಅವರ ಪೈಕಿ ಒಬ್ಬರು ಮಾತ್ರ ಬಂದಿದ್ದಾರೆ. ಇನ್ನುಳಿದ 7 ಜನ ಮಂತ್ರಿಗಳು ಬಂದಿಲ್ಲ. ಅವರು ಏತಕ್ಕೆ ಬಂದಿಲ್ಲ, ಪರಿಸ್ಥಿತಿ ಏನಾಗಿದೆ, ಆ 7ಜನ ಮಂತ್ರಿಗಳು ತಮಗೇನಾದರೂ ಪತ್ರವನ್ನು ಬರೆದಿದ್ದಾರೆಯೇ? ಅಥವಾ ಅವರೆಲ್ಲರೂ ಭಿನ್ನಮತೀಯ ಚಟುವಟಿಕೆಗಳಲ್ಲಿ ತೊಡಗಿದ್ದಾರೆಯೇ? ಮಾನ್ಯ ಮುಖ್ಯಮಂತ್ರಿಗಳಲ್ಲಿ ಅವರಿಗೆ ವಿಶ್ವಾಸವಿಲ್ಲವೇ? ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ? ತಾವು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು ಮಂತ್ರಿಗಳು ಏತಕ್ಕೆ ಬಂದಿಲ್ಲ ಎಂಬುದನ್ನು ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್ :- ಈ ಸದನ 11 ಗಂಟೆಗೆ ಅಂದಮೇಲೆ ಅವರು ಸದನಕ್ಕೆ ಬಂದು ಗೌರವವನ್ನು ಕೊಡಬೇಕು. ಆದರೆ ಮಂತ್ರಿಗಳು ಗೌರವವನ್ನು ಕೊಡುತ್ತಿಲ್ಲ ; ಆಡಳಿತ ಪಕ್ಷದವರೂ ಕೂಡ ಗೌರವವನ್ನು ಕೊಡುತ್ತಿಲ್ಲ. ಇದು ಸರಿಯಲ್ಲ. ಈ ಸದನ ಬಹಳ ಮಹತ್ತರವಾದುದು. ಈ ಸದನ ಸೇರಿದಕೂಡಲೇ ತಾವೂ ಕೂಡ ಕಾಲಕ್ಕೆ ಸರಿಯಾಗಿ ಬಂದು ಪೀಠದಲ್ಲಿ ಕುಳಿತುಕೊಳ್ಳುತ್ತಿದ್ದೀರಿ. ಆದರೆ ಮಂತ್ರಿಗಳೇ ಬರುವುದಿಲ್ಲ ಎಂದರೆ ಅವರು ಈ ಸದನಕ್ಕೆ ತೋರಿಸುತ್ತಿರುವ ಅಗೌರವ ಇದು ಎಂದು ಹೇಳಬೇಕಾಗುತ್ತದೆ. ಅಷ್ಟೇ ಅಲ್ಲ, ಇದು ಅಕ್ಷಮ್ಯ ಅಪರಾಧವೆಂದು ಹೇಳಬೇಕಾಗುತ್ತದೆ. ಅನೇಕಸಾರಿ ಈ ಸದನದಲ್ಲಿ ಸಚಿವಸಂಪುಟದ ಮಂತ್ರಿಗಳೇ ಇಲ್ಲವೆಂದು ನಾವು ತಮಗೆ ಹೇಳಿದ್ದೇವೆ. ತಾವೂ ಕೂಡ ಅನೇಕಸಾರಿ ಅವರಿಗೆ ಎಚ್ಚರಿಕೆಯನ್ನೂ ಕೂಡ ಕೊಟ್ಟಿದ್ದೀರಿ. ಇಷ್ಟಾದರೂ ಕೂಡ ಇವತ್ತಿನ ಪ್ರಶ್ನೆಗಳಿಗೆಉತ್ತರ ಕೊಡಬೇಕಾದ 7 ಜನ ಮಂತ್ರಿಗಳು ಇಲ್ಲವೆಂದರೆ ಹೇಗೆ? ತಮಗೆ ಗೊತ್ತಿರುವಂತೆ ಇಲ್ಲಿಗೆ ಬಂದಿರುವವರಲ್ಲಿ 3 ಜನ ಮಂತ್ರಿಗಳ ಪೈಕಿ ಇಬ್ಬರು ಮಾತ್ರ ಈ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸಂಬಂಧಪಟ್ಟವರು. ಇನ್ನುಳಿದ ಮಂತ್ರಿಗಳು ಯಾರೂ ಇಲ್ಲವೆಂದರೆ ಏನು ಹೇಳಬೇಕು. 42 ಜನ ಮಂತ್ರಿಗಳು ಅಂದರೆ ಒಂದು ದೊಡ್ಡ ಟ್ರಕ್‌ಲೋಡ್ ಇದ್ದಂತೆ. ಇಷ್ಟು ಮಂತ್ರಿಗಳ ಪೈಕಿ 5 ಜನ ಮಂತ್ರಿಗಳು ಸಹ ಇಲ್ಲ ಎಂದರೆ ಇದು ತುಂಬಾ ಆಭಾಸವಾಗುತ್ತದೆ.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಇವತ್ತಿನ ಪ್ರಶ್ನೆಗಳ ಪಟ್ಟಿಯಲ್ಲಿ ಕೊನೆಯ ಪ್ರಶ್ನೆ ಮಾನ್ಯ ಸದಸ್ಯರಾದ ಎಸ್.ಹೆಚ್. ಕೌಜಲಗಿಯವರಿಗೆ ಸೇರಿದ್ದು ಇದೆ. ಆದ್ದರಿಂದ ಮೊದಲನೇ ಪ್ರಶ್ನೆ ಹಾಗೂ ಕೊನೆಯ ಪ್ರಶ್ನೆ ಇವೆರಡೂ ಕೂಡ ಒಂದೇ ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ ಎರಡನ್ನೂ ಒಟ್ಟಿಗೆ ತೆಗೆದುಕೊಂಡರೆ ಉತ್ತರ ಕೊಡಲು ನನಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು :- ಆಗಬಹುದು.

ವಿಷಯ :- ಅಕ್ಷಯ ಯೋಜನೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 101(619)

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ(ಔರಾದ್)